ಕಾರಣಗಳು :

1) ಶಿಕ್ಷಣ ಇಲಾಖೆಯ ವಿದ್ಯಾವಿಕಾಸ ಯೋಜನೆಯಲ್ಲಿ ನಿಗಮವು ಸರಬರಾಜು ಮಾಡಬೇಕಾಗಿರುವ ಸಮವಸ್ತ್ರದ ಪ್ರಮಾಣವನ್ನು ಕಡಿತಗೊಳಿಸಿರುವುದರಿಂದ ಹಾಗೂ 1996-97ನೇ ಸಾಲಿಗೆ ಈ ಯೋಜನೆಯನ್ನು ಮುಂದುವರೆಸುವ ಬಗ್ಗೆ ಆದೇಶವನ್ನು ಹೊರಡಿಸದೇ ಇರುವುದರಿಂದ.

2) ರಾಜ್ಯದ ಸಹಕಾರಿ ನೂಲಿನ ಗಿರಣಿಗಳು ಅವಶ್ಯಕತೆಗೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ನೂಲು ಸರಬರಾಜು ಮಾಡದೇ ಇರುವುದರಿಂದ

ಈ) ಉಣ್ಣೆ ಬಟ್ಟೆ ನೇಕಾರರ ಸರಾಸರಿ

ಮಾಸಿಕ ಆದಾಯ	ರೂ.	500.00
ರೇಷ್ಮೆ ಬಟ್ಟೆ ನೇಕಾರರ ಸರಾಸರಿ	ರೂ.	900.00 ರಿಂದ
ಮಾಸಿಕ ಆದಾಯ	ರೂ.	2000.00 ರವರೆಗೆ
ಹತ್ತಿಬಟ್ಟೆ ನೇಕಾರರ ಸರಾಸರಿ	ರೂ.	700.00 ರಿಂದ
ಮಾಸಿಕ ಆದಾಯ	ರೂ.	1500.00 ರವರೆಗೆ

ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆ ಘಟಕಗಳ ಸಂಖ್ಯೆ

150 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸಣ್ಣ ಕೈಗಾರಿಕೆ ಘಟಕಗಳಿವೆ?

ಆ) ಈ ಸಣ್ಣ ಕೈಗಾರಿಕಾ ಘಟಕಗಳಲ್ಲಿ ರಾಜ್ಯ ಸರ್ಕಾರದವರು ಹೂಡಲಾಗಿರುವ ಒಟ್ಟು ಬಂಡವಾಳ ಎಷ್ಟು?

ಈ) ಈ ರೋಗಗ್ರಸ್ಥ ಹಾಗೂ ಸ್ಥಗಿತ ಗೊಂಡಿರುವ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದವರು ವಿಶೇಷ ಯೋಜನೆಯನ್ನೇನಾದರೂ ರೂಪಿಸಲಾಗಿರುವರೇ, ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಎನ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ದಿನಾಂಕ 31-3-95ಕ್ಕೆ ರಾಜ್ಯದಲ್ಲಿ ಒಟ್ಟು 1,63,521 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿರುತ್ತವೆ.

ಆ) ಸಂಬಂಧಪಟ್ಟ ಪ್ರಧಾನ ವ್ಯವಸ್ಥಾಪಕರುಗಳಿಂದ ಮಾಹಿತಿಯನ್ನು ಕೋರಿದ್ದು, ಬಂದ ಕೂಡಲೇ ಮಾಹಿತಿಯನ್ನು ಒದಿಗಸಲಾಗುವುದು.

ಇ) ಭಾರತೀಯ ರಿಸರ್ವ ಬ್ಯಾಂಕಿನ ಮಾಹಿತಿಯ ಪ್ರಕಾರ ರಾಜ್ಯದಲ್ಲಿ 31-3-94ರ ಅಂತ್ಯಕ್ಕೆ ಒಟ್ಟು 13,950 ರೋಗಗ್ರಸ್ಥ ಕೈಗಾರಿಕೆಗಳು ಹಾಗೂ 4,328 ಸ್ಥಗಿತಗೊಂಡ ಕೈಗಾರಿಕೆಗಳು ಇವೆ.

ಈ) ರೋಗಗ್ರಸ್ಥ ಘಟಕಗಳ ಹಾಗೂ ಸ್ಥಗಿತಗೊಂಡಿರುವ ಘಟಕಗಳ ಪುನಃಶ್ಚೇತನಕ್ಕೆ ಈಗಾಗಲೇ ಸಮಿತಿಯೊಂದಿದ್ದು, ಇದು 1988 ರಿಂದ ಕಾರ್ಯನಿರ್ವಹಿಸುತ್ತಿದೆ. ಈ ಸಮಿತಿ ಇತ್ತೀಚಿನ ವರದಿಯಂತೆ 317 ಘಟಕಗಳಿಗೆ ಬೀಜಧನ ಸಾಲದ ಮಂಜೂರಾತಿ ನೀಡಿದೆ. ಉತ್ತೇಜಕರ ಶೇಕಡ 50ರ ಪಾಲಿಗೆ ಎದುರಿಗೆ ಬೀಜ ಧನ ಸಾಲದ ಮೊತ್ತ ರೂ. 50.00 (ಐವತ್ತು ಸಾವಿರ) ಕ್ಕೆ ಮೀರದಂತೆ ನೀಡಲಾಗುವುದು.

ಕುಣಿಗಲ್‌ನಲ್ಲಿ ರೇಷ್ಮೆ ಮಾದರಿ ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆ

151 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಬಿತ್ತನೆ ವಲಯದಲ್ಲಿರುವ ಒಟ್ಟು ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳೆಷ್ಟು?*

ಆ) *ಕುಣುಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೇಂದ್ರಗಳೆಷ್ಟು?*

ಇ) *ಸದರಿ ಕ್ಷೇತ್ರದಲ್ಲಿ ಈಗ ಪ್ರಾರಂಭಿಸಬೇಕೆಂದಿರುವ ಅಂತಹ ಕೇಂದ್ರಗಳೆಷ್ಟು? ಮತ್ತು ಎಲ್ಲೆಲ್ಲಿ ಹಾಗೂ ಈ ವಿಷಯವು ಯಾವ ಹಂತದಲ್ಲಿದೆ.*

ಈ) *ಈ ಬಗ್ಗೆ ಸರ್ಕಾರದ ಕ್ರಮವೇನು?*

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) 20 ವಿವರಗಳುಳ್ಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಎಲ್ಲಾ ಕಾಮಗಾರಿಗಳು ಪೂರ್ಣಗೊಂಡ ನಂತರ ಕೆಲಸವನ್ನು ಪ್ರಾರಂಭಿಸಲಾಗುತ್ತದೆ.

ಕೈಗಾರಿಕೆ ಪ್ರದೇಶದಲ್ಲಿ ನೀರಿನ ಕೊರತೆ

153 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೈಗಾರಿಕಾ ಉದ್ದೇಶಕ್ಕೆ ಆಗತ್ಯವಿರುವ ನೀರಿನ ಪ್ರಮಾಣವೆಷ್ಟು ಕೈಗಾರೀಕೀಕರಣದಿಂದ ಹೆಚ್ಚುವ ಕಾರ್ಮಿಕರ ಸಂಖ್ಯೆ ಎಷ್ಟು? (1) ಈ ಪ್ರದೇಶಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡುತ್ತಿದೆ.*